


ಊಟಕ್ಕೆ ದಿನಸಿ ಸಿಗುತ್ತಿಲ್ಲ, ಬಾಡಿಗೆ ಕಟ್ಟಲು ಹಣವಿಲ್ಲ, ಮಕ್ಕಳಿಗೆ ಶಾಲೆಯಿಲ್ಲ, ಜ್ವರ ಬಂದರೂ ವೈದ್ಯರನ್ನು ಕಾಣಲು ಸಾಧ್ಯವಿಲ್ಲ. ಮಹಾಮಾರಿ ವಕ್ಕರಿಸಿದರೆ ಮೂರು ನಾಲ್ಕು ಲಕ್ಷ ರೂಪಾಯಿ ಚಿಕಿತ್ಸೆಗೆ ಹೇಗೆ ಹೊಂದಿಸಬೇಕು? ರೋಗದ ಜೊತೆ ಬದುಕಬೇಕೆಂದು ಎಲ್ಲರೂ ಹೇಳುವವರೇ! ಸರ್ರಕಾ ಎಷ್ಟೇ ಪ್ರಯತ್ನ ಮಾಡಿದರೂ ರೋಗ ನಿಯಂತ್ರಣ, ಚಿಕಿತ್ಸೆ ಕಷ್ಟವೆಂಬುದು ಸಾಬೀತಾಗಿದೆ. ಎಚ್ಚರಿಕೆಯಲ್ಲಿ ಇರಬೇಕು. ಜನವಸತಿ ಕಡಿಮೆಯಿರುವ ಗ್ರಾಮಗಳು ಸುರಕ್ಷಿತ ನೆಲೆ. ಗ್ರಾಮ ಮರುವಲಸೆಯ ಈ ಸಮೂಹಸನ್ನಿಯಿಂದ ಕೊರೊನಾ ಕೂಡಾ ಹಳ್ಳಿ ಹಳ್ಳಿಗೆ ನುಗ್ಗುವ ಭೀತಿ ಎದುರಾಗಿದೆ.

‘ನಗರದಲ್ಲಿ ಇದ್ದೋರು ಇಲ್ಲಿಗೆ ಬರೋದು ಬೇಡ, ರೋಗ ಪಸರಿಸುತ್ತದೆ. ಬಂದ ತಪ್ಪಿಗೆ ದಂಡ ಕಟ್ಟಬೇಕು’ ಎಂದು ಕೆಲವು ಹಳ್ಳಿಗರು ಡಂಗುರ ಹೊಡೆಸಿದ್ದಾರೆ. ರಸ್ತೆಗೆ ಅಗಳ ಹೊಡೆದು, ಬೇಲಿ ಹಾಕಿ, ಕಾವಲು ಕಾಯುತ್ತ ಮರಳಿ ಬರುವವರನ್ನು ತಡೆದ ನೂರಾರು ಘಟನೆಗಳಿವೆ. ನಮ್ಮದೇ ಅಕ್ಕತಂಗಿ, ಅಣ್ಣತಮ್ಮಂದಿರನ್ನು ಮನೆಯೊಳಗೆ ಬಿಟ್ಟುಕೊಳ್ಳುವ ಧೈರ್ಯ ಯಾರಿಗೂ ಇಲ್ಲ. ಕ್ವಾರಂಟೈನ್ ಕೇಂದ್ರಗಳು ಭರ್ತಿಯಾಗಿ, ಅಲ್ಲಿಯೂ ಅವ್ಯವಸ್ಥೆ ವರದಿಯಾಗುತ್ತಿವೆ. ದಯವಿಟ್ಟು ಊರಿಗೆ ಹೋಗಬೇಡಿ’ ಎಂದು ರಾಜ್ಯದ ಮುಖ್ಯಮಂತ್ರಿ ಯಡಿಯೂರಪ್ಪನವರೇ ಕೈಮುಗಿದು ಕೇಳಿಕೊಂಡಿದ್ದಾರೆ. ಲಾಕ್‌ಡೌನ್, ಸೀಲ್‌ಡೌನ್, ಕರ್ಫ್ಯೂ ಪ್ರಹಾರಕ್ಕೆ ಲಕ್ಷಾಂತರ ಕುಟುಂಬಗಳ ಆರ್ಥಿಕ ಪರಿಸ್ಥಿತಿ ಕಷ್ಟವಾಗಿರುವಾಗ ಯಾರ ಮಾತನ್ನು ಯಾರೂ ಕೇಳುವಂತಿಲ್ಲ. ದುಬಾರಿ ನಗರದಲ್ಲಿ ರೋಗದ ಮಧ್ಯೆ ಬದುಕುವ ದಾರಿಯಾದರೂ ಯಾವುದು? ಕುಳಿತು ಉಣ್ಣುವುದು ಸಾಧ್ಯವೇ? ಪ್ರತಿಯೊಬ್ಬರಿಗೂ ಸಮಸ್ಯೆಗಳಿವೆ.

ಐದೇ ಐದು ತಿಂಗಳ ಹಿಂದೆ ಹೇಗೆ ಬದುಕಿದ್ದೇವೆಂದು ಊಹಿಸಿದರೆ ಅಚ್ಚರಿಯಾಗುತ್ತದೆ. ವೀಕೆಂಡ್ ಮಸ್ತಿ, ಟಾಕೀಸ್, ಮಾಲ್ ಹಾಗೂ ಹೊಟೆಲ್ , ಪ್ರವಾಸಿ ತಾಣ, ಹೋಂಮ್ ಸ್ಟೇ, ರೆಸಾರ್ಟ್ ಸುತ್ತುವವರಿದ್ದರು. ಪ್ರತಿ ಗಂಟೆಗೆ ಹೆದ್ದಾರಿಯಲ್ಲಿ ಸಾವಿರಾರು ವಾಹನ ಸಂಚಾರವಿತ್ತು. ಜಗತ್ತಿನ ಯಾವ ಮೂಲೆಗೆ ಹೋಗಬಹುದು, ಏನು ಬೇಕಾದರೂ ಅಲ್ಲಿಂದ ತರಿಸಬಹುದು ಎನ್ನುವ ಪರಿಸ್ಥಿತಿಯಿತ್ತು. ಕೊಬ್ಬರಿ ಬೆಲೆ ಕುಸಿತ, ಟೊಮೆಟೋ ರಸ್ತೆಗೆ ಎಸೆತ, ಕಬ್ಬಿನ ಹಣ ಬಾಕಿ, ಆಲೂಗಡ್ಡೆಗೆ ರೋಗ, ತೊಗರಿಗೆ ಕಾಯಿಕೊರಕ, ಅಡಿಕೆಯ ಏರಿಳಿತ ಯಾವುದೂ ನಗರಕ್ಕೆ ಸ್ವಲ್ಪವೂ ಗೊತ್ತೇ ಆಗಿರಲಿಲ್ಲ. ಭತ್ತಕ್ಕೆ ಬೆಲೆಯಿಲ್ಲದೇ ರಾಯಚೂರಿನ ರೈತರ ಗೋದಾಮಿನಲ್ಲಿ ಲಕ್ಷಾಂತರ ಕ್ವಿಂಟಾಲ್ ಕೊಳೆಯುತ್ತಿದ್ದರೂ ಅನ್ನದ ಬೆಲೆ ಅರ್ಥವಾಗಿರಲಿಲ್ಲ. ಹಣವಿದ್ದರೆ ಎಲ್ಲವನ್ನೂ ಪಡೆಯಬಹುದೆಂದು ಲೆಕ್ಕ ಹಾಕಿದವರಿಗೆ ಜೀವ ಬಚಾವಾದರೆ ಸಾಕೆಂಬ ಸ್ಥಿತಿ ಒದಗಿದೆ. ಕಣ್ಣಿಗೆ ಕಾಣದ ವೈರಸ್ ಎಂಥವರನ್ನೂ ನಡುಗಿಸಿದೆ.

ಓದಿದ ಪದವಿಗೆ ಯೋಗ್ಯ ಕೆಲಸ ಊರಲ್ಲಿ ಸಿಗುತ್ತಿಲ್ಲ, ಸಾರಿಗೆ ಸಂಪರ್ಕ ಸರಿಯಾಗಿಲ್ಲ, ಕೃಷಿಯಿಂದ ಆದಾಯವಿಲ್ಲ, ಚಿಕ್ಕ ಜಮೀನಲ್ಲಿ ಸಂಸಾರ ನಿಭಾಯಿಸಲು ಸಾಧ್ಯವಿಲ್ಲ. ಸ್ವಂತ ದುಡಿಮೆಯಲ್ಲಿ ತಮ್ಮದೇ ನಿರ್ಧಾರದಂತೆ ಬದುಕುವ ಕನಸಿಗೆ ಎದ್ದು ನಗರ ಸೇರಿದ್ದು ಸಹಜವೇ ! ಮೇಷ್ಟ್ರುಗಳು, ಮೆಕ್ಯಾನಿಕ್‌ಗಳು, ಹೋಟೆಲ್, ಕಾರ್ಮಿಕರು, ಕಟ್ಟಡ ಕಾರ್ಮಿಕರು, ಗಾರ್ಮೆಂಟ್, ಬೇಕರಿ, ದಿನಸಿ ಅಂಗಡಿ, ಟ್ಯಾಕ್ಸಿ ಡ್ರೈವರ್ ಕೆಲಸದಿಂದ ಶುರುವಾಗಿ ನೂರಾರು ಕೆಲಸಗಳು ದೊರಕಿವೆ. ಸಿಲಿಕಾನ್ ಸಿಟಿಯಲ್ಲಿ ತಿಂಗಳಿಗೆ ಅರವತ್ತು ಎಪ್ಪತ್ತು ಸಾವಿರ ವೇತನ ಎಣಿಸುತ್ತಿದ್ದ ಖಾಸಗಿ ಕಂಪನಿಗಳ